| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 840 |
| ಸದಸ್ಯರ ಹೆಸರು: | ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16-12-2024 |
| ಉತ್ತರಿಸುವರು | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅರಣ್ಯ ಒತ್ತುವರಿ ಪ್ರಕರಣಗಳಲ್ಲಿ ನಿಗದಿತ ಅವಧಿಯಲ್ಲಿ ಅರಣ್ಯ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಜಂಟಿ ಸರ್ವೆ ಮಾಡಿ ಪರಿಹಾರ ಹುಡುಕದ ಕಾರಣದಿಂದಾಗಿ ಹಲವಾರು ಅರ್ಹ ಅರಣ್ಯ ಒತ್ತುವರಿದಾರರಿಗೆ ಇಂದಿಗೂ ತೊಂದರೆಯಾಗುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅರಣ್ಯ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ, ಜಂಟಿ ಸರ್ವೆ ಮಾಡಿ ಅರ್ಹರಿಗೆ ಪರಿಹಾರವನ್ನು ಒದಗಿಸಲಾಗುತ್ತಿದ್ದು, ಕೆಲವು ಪ್ರಕರಣಗಳಲ್ಲಿ ವಿವಿಧ ಕಾರಣಗಳಿಂದ ವಿಳಂಬವಾಗುತ್ತಿದೆ. ಅಲ್ಲದೇ ದಿನಾಂಕ: 27.04.1978 ರ ಪೂರ್ವದ ಅರ್ಹ ಅರಣ್ಯ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಾಗ ಜಂಟಿ ಸರ್ವೆ ಕಾರ್ಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಸಚಿವಾಲಯ, ಭಾರತ ಸರ್ಕಾರ ನವದೆಹಲಿ ರವರ ಪತ್ರ ಸಂಖ್ಯೆ: 8-50/95-FC, ದಿನಾಂಕ: 15.05.1996 ರಲ್ಲಿ ದಿನಾಂಕ: 27.04.1978 ರ ಪೂರ್ವದ ಅರಣ್ಯ ಒತ್ತುವರಿಗಳನ್ನು ಸಕ್ರಮಾತಿಗೊಳಿಸುವ ಸಂಬಂಧ ಅರಣ್ಯ (ಸಂರಕ್ಷಣಾ) ಕಾಯ್ದೆ-1980 ರ ಕಲಂ-2 ರನ್ವಯ ಒಟ್ಟು 19,348 ಪ್ರಕರಣಗಳಲ್ಲಿ ಒಟ್ಟು ವಿಸ್ತೀರ್ಣ 14,848.93 ಹೆ. ಪ್ರದೇಶದಲ್ಲಿನ ಅರ್ಹ ಒತ್ತುವರಿಗಳನ್ನು ಸಕ್ರಮಗೊಳಿಸಲು ಕೆಲವು ಷರತ್ತುಗಳಿಗೆ ಒಳಪಡಿಸಿ ಅನುಮೋದನೆ ನೀಡಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ರಾಜ್ಯದಲ್ಲಿ ಅರಣ್ಯ ಒತ್ತುವರಿ ಸಮಸ್ಯೆ ಪರಿಹರಿಸುವ ಸಲುವಾಗಿ ಅರಣ್ಯ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಸೇರಿ ಈಗಾಗಲೇ ಜಂಟಿ ಸರ್ವೆ ನಡೆಸಿದೆಯೇ; | |
| ಇ) | ನಡೆಸಿದ್ದಲ್ಲಿ, ಇಂದಿಗೂ ಅರ್ಹ ಅರಣ್ಯ ಒತ್ತುವರಿದಾರರ ಪ್ರಕರಣಗಳನ್ನು ಸಕ್ರಮಗೊಳಿಸದೇ ಇರಲು ಕಾರಣಗಳೇನು; | ದಿನಾಂಕ:27.04.1978ರ ಪೂರ್ವದಲ್ಲಿ ಒತ್ತುವರಿ ಪ್ರದೇಶಗಳನ್ನು ಅರಣ್ಯ ಸಕ್ರಮಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ- 1963ರ ಕಲಂ-28ರಲ್ಲಿ -ನೋಟಿಫೈ / -ಡಿ-ರಿಸರ್ವ್ ಮಾಡಬೇಕಾಗಿರುತ್ತದೆ.<br>ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 13.11.2000 ರ IA No. 2 in WP No. 337/1995, and again re-iterated by the Supreme Court on 09.02.2004 in IA No. 16 that "... Pending further orders, no de-reservation of Forest/Sanctuaries/ National Parks shall be effected" ಎಂದು ಆದೇಶಿಸಿರುತ್ತಾರೆ.<br>ಈ ಆದೇಶದ ಹಿನ್ನೆಲೆಯಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶಗಳನ್ನು ಸಕ್ರಮಗೊಳಿಸಲು ಕಾನೂನಾತ್ಮಕವಾಗಿ ಸಲಹೆಯನ್ನು ಪಡೆದು ಹಾಗೂ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಅರ್ಹ ಅರಣ್ಯ ಒತ್ತುವರಿದಾರರ ಪ್ರಕರಣಗಳನ್ನು ಪರಿಹರಿಸುವ ಸಲುವಾಗಿ ಈ ಕೂಡಲೇ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳನ್ನೊಳಗೊಂಡ ಜಂಟಿ ಮರು ಸರ್ವೆ ಮಾಡಿ, ಅರ್ಹ ಅರಣ್ಯ ಒತ್ತುವರಿದಾರರಿಗೆ ನ್ಯಾಯ ದೊರಕಿಸಿಕೊಡಲು ಸರ್ಕಾರ ಕೂಡಲೇ ಕ್ರಮ ವಹಿಸುವುದೇ? | |

| | | |
|---|---|---|
| | | ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ: .8-50/95-FC, ದಿನಾಂಕ: 15.05.1996 ಹಾಗೂ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 5 ಎಫ್‌ಜಿಎಲ್ 90, ಬೆಂಗಳೂರು, ದಿನಾಂಕ:05.05.1997 ರನ್ವಯ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುವುದನ್ನು ಪರಿಗಣಿಸಿ, ಆಯಾ ಜಿಲ್ಲಾಧಿಕಾರಿಗಳು ಅರ್ಹ ಒತ್ತುವರಿದಾರರು ಹಾಗೂ ವಿಸ್ತೀರ್ಣವನ್ನು ಗುರುತಿಸ ಬೇಕಾಗಿರುತ್ತದೆ. ಆದರೆ ಕೆಲವು ಜಿಲ್ಲೆಗಳಲ್ಲಿ ಈ ಗುರುತಿಸಿವಿಕೆಯ ಕಾರ್ಯವು ಸಂಪೂರ್ಣ ಗೊಂಡಿರುವುದಿಲ್ಲ.<br><br>ಇದಲ್ಲದೇ, ಹಲವಾರು ಪ್ರಕರಣಗಳಲ್ಲಿ ಈ ಹಿಂದೆ ತಯಾರಿಸಿರುವ ಒತ್ತುವರಿದಾರರ ಜಮೀನಿನ ನಕ್ಷೆಯು ಹಾಗೂ ಅದರ ಸಂಪೂರ್ಣ ಮಾಹಿತಿ ಲಭ್ಯವಿರುವುದಿಲ್ಲ.<br><br>ದಿನಾಂಕ:27.04.1978ರ ಪೂರ್ವದ ಅರಣ್ಯ ಒತ್ತುವರಿಗಳಿಗೆ ಸಂಬಂಧಿಸಿದಂತೆ ಅರಣ್ಯ ಪ್ರದೇಶಗಳನ್ನು ಪ್ರದೇಶಗಳ ಪರಿಹಾರಾತ್ಮಕ ಸಕ್ರಮಗೊಳಿಸುವ ಪ್ರದೇಶಗಳಲ್ಲಿ ಪರ್ಯಾಯತ್ಮಕ ನೆಡುತೋಪು ಪ್ರದೇಶಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಪಹಣಿಯಲ್ಲಿ ಅರಣ್ಯ ಇಲಾಖೆ ಎಂದು ಇಂಡೀಕರಿಸಿ, ಸದರಿ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆ-1963ರಡಿ ಮೀಸಲು/ರಕ್ಷಿತ ಅರಣ್ಯ ಎಂದು ಅಧಿಸೂಚಿಸಬೇಕಾಗಿರುತ್ತದೆ. ಇದರೊಂದಿಗೆ, ಪರಿಹಾರಾತ್ಮಕ ನೆಡುತೋಪು ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸಲು ಕೈಗೊಳ್ಳಬೇಕಾಗಿರುತ್ತದೆ.<br><br>ಇದಲ್ಲದೇ, ಈ ಮೇಲೆ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಷರತ್ತುಗಳನ್ನು ಕೆಲವೊಂದು ಕ್ಷೇತ್ರಮಟ್ಟದಲ್ಲಿ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ.<br>ಆದ್ದರಿಂದ ಮೇಲೆ ನಮೂದಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ, ಕಾನೂನು ಅಡಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: FEE/170/FGL/2024**

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.